**Q.P. Code – 31614**

## Sixth Semester B.A. Degree Examination, April/May 2019

*(CBCS – Semester Scheme)*

**ಐಚ್ಛಿಕ ಕನ್ನಡ**

### Paper VIII – ವೈಚಾರಿಕ ಸಾಹಿತ್ಯ : ದೇವರು, ಸಂಸ್ಕೃತಿ ಅಧ್ಯಯನ ಮತ್ತು ಛಂದಸ್ಸು

*Time : 3 Hours]* *[Max. Marks : 90*

ಭಾಗ–೧ : ದೇವರು

I. (ಅ) **ಒಂದರ** ಭಾಗದ ಮಹತ್ವವನ್ನು ವಿವರಿಸಿ : **(1 × 5 = 5)**

1. ಕಲ್ಲು ಮರಗಿಡಗಳೂ ದೇವರಾಗಬಹುದು ಮಾರಮ್ಮನ ಗುಡಿಗಳಲ್ಲೆಲ್ಲ ಸಾಮಾನ್ಯವಾಗಿ ಇರುವುದು ಕಲ್ಲು; ಕಲ್ಲಿನ ವಿಗ್ರಹವಲ್ಲ, ಬರೀ ಕಲ್ಲು. ಮಾರಮ್ಮ ಅದರಲ್ಲಿ ನೆಲೆಸಿ ಅದಕ್ಕೆ ದೈವತ್ವ ಕೊಡುತ್ತಾಳೆ ಎಂದು ನಂಬಿಕೆ.

2. ತನ್ನ ರೂಪವನ್ನು ಕೊಟ್ಟ ಮಾನವ ದೇವರಿಗೆ ತನ್ನ ಗುಣಗಳನ್ನೂ ಆರೋಪಿಸಿದ; ಇದು ಸ್ವಾಭಾವಿಕ, ಆದ್ದರಿಂದ ದೇವರುಗಳ ಚರಿತ್ರೆ ಅನೇಕ ವೇಳೆ ನಮ್ಮ ಚರಿತ್ರೆಯನ್ನು ಹೋಲುತ್ತದೆ. ನಮ್ಮ ಲೋಪದೋಷಗಳೂ ಅವರಲ್ಲೂ ಕಾಣಿಸಿಕೊಳ್ಳುತ್ತವೆ.

(ಆ) **ಎರಡರ** ಸಂದರ್ಭದ ಪ್ರಸ್ತುತತೆಯನ್ನು ತಿಳಿಸಿ : **(2 × 3 = 6)**

1. ಮರವೇ ದೇವರಾಗಬಹುದಾದರೆ ಪ್ರಾಣಿಗಳೂ ದೇವರಾಗಬಾರದೇಕೆ?

2. ಗಣಪತಿ ಇರುವ ಕಡೆ ರುಚಿ ರುಚಿಯಾದ ಭಕ್ಷ್ಯಗಳು ಸಿಕ್ಕುತ್ತವೆ.

3. ಸಂಕಟದ ಅನುಭವವಿಲ್ಲದಿದ್ದರೆ ನಮಗೆ ಸುಖದ ಅರಿವೇ ಅಗುವುದಿಲ್ಲ.

4. ನಿಮ್ಮ ಶತ್ರುಗಳನ್ನು ಪ್ರೀತಿಸಿ, ನಿಮಗೆ ಶಾಪ ಹಾಕಿದವರನ್ನು ಹರಸಿ.

(ಇ) **ಒಂದು** ವಿಷಯಕ್ಕೆ ಟಿಪ್ಪಣಿ ಬರೆಯಿರಿ : **(1 × 4 = 4)**

1. ದೇವರ ಭಯ

2. ಎ.ಎನ್. ಮೂರ್ತಿರಾವ್

II. **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 10 = 20)**

1. ದೇವರುಗಳನ್ನು ಕುರಿತ ಕಥೆಗಳ ಸ್ವರೂಪವನ್ನು ವಿವರಿಸಿ.

2. ಮಹತ್ವ ಸಂಬಂಧಿ ಮತ್ತು ಮೌಲ್ಯ ಸಂಬಂಧಿ ಗುಣಗಳನ್ನು ಚರ್ಚಿಸಿ.

3. ಪ್ರೇಮ ಸ್ವರೂಪನಾದ ದೇವರ ಪರಿಕಲ್ಪನೆ ಕುರಿತು ಬರೆಯಿರಿ.

**Q.P. Code – 31614**

ಭಾಗ–೨ : ಸಂಸ್ಕೃತಿ ಅಧ್ಯಯನ

III. (ಅ) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2 × 5 = 10)**

1. ಹಾ.ಮಾ. ನಾಯಕ
2. ಕಾಯಕದ ಪರಿಕಲ್ಪನೆ
3. ಸಂಸ್ಕೃತಿ ಶಬ್ದದ ಚರಿತ್ರೆ

(ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1 × 10 = 10)**

1. ದೃಷ್ಟಾಂತದ ಮೂಲಕ ಹಾ.ಮಾ. ನಾಯಕರು ಸಂಸ್ಕೃತಿ ಕುರಿತು ವ್ಯಕ್ತಪಡಿಸುವ ನಿಲುವು ಏನು? ಸ್ಪಷ್ಟಪಡಿಸಿ.
2. ಕನ್ನಡ ಸಂಸ್ಕೃತಿಯ ವಿಶಿಷ್ಟತೆಯನ್ನು ಡಿ.ಆರ್. ನಾಗರಾಜು ಹೇಗೆ ನಿರ್ಣಯಿಸುತ್ತಾರೆ? ವಿವರಿಸಿ.

IV. (ಅ) **ಒಂದು** ವಿಷಯಕ್ಕೆ ಟಿಪ್ಪಣಿ ಬರೆಯಿರಿ : **(1 × 5 = 5)**

1. ಚೈತನ್ಯ ಸಂಸ್ಕೃತಿ
2. ಡಿ.ಆರ್. ನಾಗರಾಜು

(ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1 × 10 = 10)**

1. ಬಸವಣ್ಣನವರ ವಚನಗಳಲ್ಲಿ ಜನ ಸಂಸ್ಕೃತಿಯ ವಿರುದ್ಧದ ತಾತ್ವಿಕ ಕೋಪ ಅಭಿವ್ಯಕ್ತಗೊಂಡಿರುವ ಬಗೆಯನ್ನು ವಿವರಿಸಿ.
2. ರಹಮತ್ ತರೀಕೆರೆಯವರು ಸಂಸ್ಕೃತಿಯ ಅರ್ಥ ವೈವಿಧ್ಯತೆಯನ್ನು ವಿಸ್ತರಿಸಿರುವ ಬಗೆಯನ್ನು ಪರಿಶೀಲಿಸಿ.

ಭಾಗ–೩: ಛಂದಸ್ಸು

V. (ಅ) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2 × 5 = 10)**

1. ತ್ರಿಪದಿ
2. ಕಂದ ಪದ್ಯ
3. ಸಾಂಗತ್ಯ

(ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1 × 10 = 10)**

1. ಛಂದಸ್ಸಿನ ಸ್ವರೂಪ ಮತ್ತು ಪ್ರಯೋಜನ ಕುರಿತು ಬರೆಯಿರಿ.
2. ಖ್ಯಾತ ಕರ್ನಾಟಕ ವೃತ್ತಗಳು ಯಾವುವು? ಎರಡನ್ನು ವಿವರಿಸಿ.

---